

‘ಕನ್ನಡ ಮಾತು ತಲೆಯೆತ್ತುವ ಬಗೆ’ ಹಾಗೂ ‘ಕನ್ನಡದ ಪುನರುಜ್ಜೀವನ’ ಉಪನ್ಯಾಸಗಳ ಮೂಲಕ ಕನ್ನಡಪ್ರಜ್ಞೆಯ ಜಾಗೃತಿಗೆ ತಾತ್ವಿಕತೆಯೊಂದನ್ನು ಸೃಜಿಸಿದ ಮೊದಲಿಗರಾದ ಬಿ.ಎಂ. ಶ್ರೀಕಂಠಯ್ಯ

ಎರಡನೇ ಸಹಸ್ರಮಾನದಲ್ಲಿ ಕಳೆದೇ ಹೋದವು ಎರಡು ದಶಕಗಳು. ಮೂರನೇ ದಶಕಕ್ಕೆ ಕಾಲಿಟ್ಟು ಅದಾಗಲೇ ಕಳೆಯುತ್ತಿರುವುದು ಮೂರನೇ ವರ್ಷ. ಎಂದಿನಂತೆ ಮತ್ತೆ ಬಂದಿದೆ ಕರ್ನಾಟಕ ರಾಜ್ಯೋತ್ಸವ. ಎಲ್ಲೆಡೆ ಮತ್ತದೇ ಎಂಟು ಜ್ಞಾನಪೀಠಿಗಳ ಭಾವಚಿತ್ರಗಳನ್ನು ಹೊತ್ತು ಮೆರೆವ ಸಂಭ್ರಮ. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಎಂದರೆ ಇಷ್ಟೇ ಎಂಬ ಧೋರಣೆ. ನವೆಂಬರ್ ಮಾಸವಿಡೀ ಎಲ್ಲೆಡೆ ಹಳದಿ, ಕೆಂಪು ಬಾವುಟದ ಹಾರಾಟ. ನಾಡಗೀತೆಗಳ ಮೊಳಗು. ದೇಶ ಸ್ವಾತಂತ್ರ್ಯ ಗಳಿಸಿದ ನಂತರ ಮೈಸೂರು ರಾಜ್ಯವೆನಿಸಿಕೊಂಡಿದ್ದ ರಾಜ್ಯ, ಕರ್ನಾಟಕವೆಂದು ನಾಮಕರಣಗೊಂಡು ಐವತ್ತು ವರ್ಷ. ಈ ಹೊತ್ತಿನಲ್ಲಿ ಕನ್ನಡ ಸಾಹಿತ್ಯದ ವಿಮರ್ಶೆ ಮಾಡಬೇಕೋ ಅಥವಾ ಕನ್ನಡ ವಿಮರ್ಶೆಯ ವಿಮರ್ಶೆ ಮಾಡಬೇಕೋ? ಒಂದೆಡೆ ಸಾವಿರ ವರ್ಷಗಳಿಗೂ ಮೀರಿದ ಕನ್ನಡ ಸಾಹಿತ್ಯ. ಮತ್ತೊಂದೆಡೆ ನೂರು ವರ್ಷಗಳನ್ನೂ ಮೀರಿದ ಕನ್ನಡ ಸಾಹಿತ್ಯ ವಿಮರ್ಶೆ. ಈ ಎರಡರ ಭಾರವನ್ನೂ ಹೊತ್ತು ಸರಿದೂಗಿಸುತ್ತಾ ನಡೆಯುವುದು ಕ್ಲಿಷ್ಟ, ಕಷ್ಟ, ಸಂಕಷ್ಟ. ಅಂತಹದರಲ್ಲಿ ಈ ವಿಮರ್ಶಾ ಪ್ರಬಂಧವನ್ನು ಆರಂಭಿಸುವುದಾದರೂ ಹೇಗೆ?

1925ನೇ ಇಸವಿಯ ಆಗಸ್ಟ್ 26ನೇ ತಾರೀಖಿನಂದು ‘ಕನ್ನಡದ ಕಣ್ವ’ ಬಿ.ಎಂ. ಶ್ರೀಕಂಠಯ್ಯನವರು ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ಮಾಡಿದ ಚಾರಿತ್ರಿಕ ಭಾಷಣ ‘ಕನ್ನಡದ ಪುನರುಜ್ಜೀವನ’ ಇನ್ನೇನು ಕಾಣಲಿದೆ ಶತಮಾನ. ಹಾಗಾಗಿ, ಆ ಚಾರಿತ್ರಿಕ ಕಾರಣವನ್ನು ನೆಪವಾಗಿರಿಸಿಕೊಂಡು ಅಲ್ಲಿಂದಲೇ ಆರಂಭಿಸುತ್ತೇನೆ. ಶ್ರೀಯವರು ಅಂದು ಹೇಳಿದ್ದರು: “ದಾಸ್ಯ, ಪರಭಿಕ್ಷೆ, ಸಂಪ್ರದಾಯಭಂಗ ಮುಂತಾದ ಕೂಗುಗಳು ನನಗೆ ಅರ್ಥವಾಗವು. ಪುನರುಜ್ಜೀವನಕ್ಕೆ, ಸ್ವಾತಂತ್ರ್ಯಕ್ಕೆ, ಹೊಸ ಆತ್ಮಕ್ಕೆ ಪ್ರಳಯವೂ ಬೇಕು, ಸೃಷ್ಟಿಯೂ ಬೇಕು. ಅವಕ್ಕಾಗಿ, ಬಿಡುವುದೂ ಉಂಟು; ಇಡುವುದೂ ಉಂಟು; ಸೇರಿಸುವುದೂ ಉಂಟು.